ಬೆಂಗಳೂರಿನಲ್ಲಿ ಹುಟ್ಟಿ ದಾವಣಗೆರೆಯಲ್ಲಿ ಶಿಕ್ಷಣ ಪಡೆದು, ಲೇಖಕರಾಗಿ ಗುರುತಿಸಿಕೊಂಡಿರುವ ಎಚ್.ಆರ್. ಸುರೇಶ್ ಪ್ರಸ್ತುತ ದಾವಣಗೆರೆ ನಿವಾಸಿ. ಸಾಹಿತ್ಯದ ಓದು, ಬರವಣಿಗೆಯೆಂದರೆ ಅಚ್ಚುಮೆಚ್ಚು. ಅದೇ ಕಾರಣಕ್ಕಾಗಿ ಪತ್ರಿಕೋದ್ಯಮವನ್ನು ಆರಿಸಿಕೊಂಡು ವಿವಿಧ ದೈನಿಕಗಳಲ್ಲಿ ದೀರ್ಘಕಾಲ ಕಾರ್ಯ ನಿರ್ವಹಿಸಿದರು. ಕ್ರೀಡಾ ಬರವಣಿಗೆಯಲ್ಲೂ ತೊಡಗಿಸಿಕೊಂಡವರು. ಕಥೆಗಳ ಅನುವಾದದಲ್ಲೂ. ಕೃಷಿ ಕಾಯಕ ಈಗಲೂ ಜೊತೆಗಿರುವ ಹವ್ಯಾಸ.

ಕೊಚ್ಚುವುದು, ಮೆಚ್ಚುವುದು, ಮುಚ್ಚುವುದು ಅಷ್ಟೇ ಅಲ್ಲ ವಾಚಾಮಗೋಚರವಾಗಿ ತಮ್ಮದೇ ಶೈಲಿಯಲ್ಲಿ ಹೊಗಳುವುದು ಮಾಡಿದರು(!). ತಮ್ಮಲ್ಲಿ ವಿನಿಮಯವಾದ ವಿಷಯಗಳಿಗೆ ತಮ್ಮ ಕಾಲದವರಾಗಿ -ತಮ್ಮನ್ಯಾರು ತಡೆಯುವವರು ಇದ್ದಾರೆ ಎಂಬಂತೆ- ಏನು ನ್ಯಾಯಾನ್ಯಾಯ ಒದಗಿಸಬೇಕೋ ಅದನ್ನೆಲ್ಲ ಒದಗಿಸಿದರು(?!).

ಮಾತಿನ ಕೊನೆಯಲ್ಲಿ ವಿಶ್ವನಾಥಯ್ಯ 'ನಾವು ನಾಳೆ ಬೆಳಗ್ಗೆ ಹೊರಡುತ್ತೇವೆ. ನಮಗೆ ಅಪ್ಪಣೆ ಕೊಡಿ' ಎಂದು ಹೇಳುತ್ತಿದ್ದುದು, ಅದಕ್ಕೆ ಆ ಮನೆಯ ಯಜಮಾನರು ಒಪ್ಪದೇ ಇನ್ನೊಂದೆರಡು ದಿನ ಇದ್ದು ಹೋಗಿ, ಅವಸರವೇನಿದೆ ಎಂದು ಹೇಳುವುದು ನಡೆದೇ ಇತ್ತು. ಹಿಂದಿನ ದಿನಗಳಲ್ಲಿ ನಡೆದಂತೆಯೇ ಇವರಿಬ್ಬರ ಮಧ್ಯೆ ಮಾತುಕತೆ ನಡೆದೇ ಇತ್ತು. ಆದರೆ ಮೂರನೇ ದಿನ ರಾತ್ರಿ ಮಾತ್ರ ವಿಶ್ವನಾಥಯ್ಯ ನಾಳೆ ಬೆಳಗ್ಗೆ ನಾವು ಹೊರಡುತ್ತೇವೆ. ಅಪ್ಪಣೆ ಕೊಡಿ ಎಂದು ಕೇಳಿದರು. ಅಲ್ಲಿಯವರೆಗೆ ಅತಿಥಿಯೊಂದಿಗೆ ಹರಟೆ ಕೊಚ್ಚುತ್ತಾ ಆಗಷ್ಟೇ ಅರಳಿದ ಹೂವಿನಂತೆ ಗೋಚರಿಸುತ್ತಿದ್ದ ಅಪ್ಪಯ್ಯನ ಮುಖ ಮುದುಡಿತು. ಹೊರಡುತ್ತೀರಾ?! ಎಂದು ಮೆಲುದನಿಯಲ್ಲಿ ಕೇಳಿ, ಒಂದು ಬಾರಿ ನೀಳವಾಗಿ ಉಸಿರುಬಿಟ್ಟರು. ಸ್ವಲ್ಪ ತಡೆದು 'ಹೌದು ನೀವು ದೇವರ ಬರಹದಂತೆ ಬಂದಿರಿ. ಇದ್ದಿರಿ, ಅವನು ನಡೆ ಎಂದು ಹೇಳುತ್ತಿದ್ದಾನೆ, ನಡೆಯುತ್ತಿದ್ದೀರಿ. ಬೇಸರ ಮಾಡಿಕೊಂಡೇನು ಪ್ರಯೋಜನ' ಎಂದು ಹೇಳಿ, 'ಸರಿ, ನಾನಿನ್ನು ಮಲಗುತ್ತೇನೆ' ಎನ್ನುತ್ತಾ, ಅಲ್ಲಿಯವರೆಗೆ ಜಿಂಕೆಯಂತೆ ಜಿಗಿದಾಡುತ್ತಿದ್ದ ವ್ಯಕ್ತಿ ಆಮೆಯಂತೆ ಮೆಲ್ಲಮೆಲ್ಲನೆ ಹೆಜ್ಜೆ ಮೇಲೊಂದು ಹೆಜ್ಜೆ ಹಾಕುತ್ತ ತಮ್ಮ ಕೋಣೆಯೆಡೆ ನಡೆದರು.

* * *

ಬೆಳಗಾಯಿತು. ಎಲ್ಲರೂ ಎದ್ದರು. ನಿತ್ಯದ ಕಾರ್ಯಕ್ರಮ ಮುಗಿದವು. ಬೆಳಗಿನ ಉಪಾಹಾರ ಮಾಡಲು ಹೋದರು. ಉಪಾಹಾರ ಮುಗಿಸಿ ಬಂದು, ತಾವು ತಂದಿದ್ದ ಸಾಮಾನು ಸರಂಜಾಮುಗಳಿಗಾಗಿ ಹುಡುಕುತ್ತಾರೆ, ಕಾಣುತ್ತಲೇ ಇಲ್ಲ! ಅದ್ಯಾವ ಮಾಯದಲ್ಲೋ ಇವರ ಎಲ್ಲ ಲಗೇಜ್‌ಗಳನ್ನು ಅಪ್ಪಯ್ಯನ ಮೊಮ್ಮಗಳು ಶಾರ್ವರಿ ತಮ್ಮ ವಾಹನಕ್ಕೆ ತುಂಬಿಸಿದ್ದಳು. ಇದನ್ನು ಕಂಡು 'ಏಕೆ ನಮ್ಮ ಲಗೇಜನ್ನೆಲ್ಲ ಕಾರಿಗೆ ತುಂಬಿಸಿದ್ದೀಯಾ. ನಾವು ಯಾವುದಾದರೂ ವಾಹನ ಮಾಡಿಕೊಂಡು ಹೋಗುತ್ತೇವೆ' ಎಂದು ಹೇಳಿದೆವು.

'ಅಪ್ಪಯ್ಯನೇ ಹೇಳಿದ್ದಾರೆ, ನಿಮ್ಮನ್ನೆಲ್ಲ ಸುತ್ತಮುತ್ತಲಿನ ಕ್ಷೇತ್ರಗಳಿಗೆ ಸುತ್ತಿಸಿಕೊಂಡು ಬಾ ಎಂದು. ಅವರು ಹೇಳಿದ ಮೇಲೆ ಮುಗಿಯಿತು. ಕಟ್ಟಪ್ಪಣೆ ಇದ್ದಂತೆ. ಅವರ ಮಾತನ್ನು ಮೀರುವಂತಿಲ್ಲ. ನೀವೆಲ್ಲ ಬಂದು ಕಾರು ಹತ್ತಿ' ಎಂದು ಹೇಳಿದಳು.

ರಸ್ತೆಯಲ್ಲಿ ಹೋಗುತ್ತಿದ್ದವರು 'ನೆಂಟರು ಹೊರಟರಾ?'

'ಅಪ್ಪಯ್ಯ ಇಷ್ಟು ಸುಲಭಕ್ಕೆ ಬಿಟ್ಟರಾ?'

'ಮತ್ತೆ ಬನ್ನಿ, ಇಲ್ಲಿ ಇದ್ದು ಹೋಗಿ, ಅಪ್ಪಯ್ಯನಿಗೆ ನೀವು ಬಂದು ಹೋದರೆ ಖುಷಿಯಾಗುತ್ತೆ'.

'ನೆಂಟರು ಬಂದರೆ ಅವರ ಮುಖದಲ್ಲಿ ನಗು ತುಂಬುತ್ತೆ..... ಮತ್ತೆ ಹತ್ತು ವರ್ಷ ಆಯುಷ್ಯ ಹೆಚ್ಚಾಗುತ್ತೆ'.

'ಮತ್ತಷ್ಟು ಜನರಿಗೆ ಸಹಾಯ ಮಾಡುವ ಉಮೇದಿ ಮೂಡುತ್ತೆ'.

'ಮನೆಗೆ ಯಾರಾದರೂ ಬರದೇ ಇದ್ದರೆ ಅವರು ಕಳಾಹೀನವಾಗುತ್ತಾರೆ. ಇಲ್ಲಿನವರೇ ಆದ ನಮ್ಮೊಂದಿಗೂ ಮಾತನಾಡುವುದಿಲ್ಲ'.

'ನೀವು ಬಂದಿರಿ, ಅಪ್ಪಯ್ಯ ರೀಚಾರ್ಜ್